ಅದೃಶ್ಯ ಪ್ರಭಾವ ನಮ್ಮ ಮನಸ್ಸಿನ ಮೇಲಾಗುತ್ತದೆ. ಕಲೆಯ ದೊಡ್ಡ ಸಾಧನೆಗಳಲ್ಲಿ ಈ ಅದೃಶ್ಯ ಪ್ರಭಾವವೂ ಒಂದು. ಈ ಬಡತನ ನಿಮ್ಮನ್ನು ದುಃಖಕ್ಕೆ ಕೆಡುವುತ್ತದೆ. ಯಾಕೆಂದರೆ ಮನುಷ್ಯತ್ವದ ಕಾರಣದಿಂದ, ಕರುಣೆಯ ಕಾರಣದಿಂದ. ನಮ್ಮೊಳಗಿನ ಕರುಣೆಯನ್ನು ಕಲಾಕೃತಿ ಜಾಗೃತಗೊಳಿಸುತ್ತದೆ. ರೈಲಿನಲ್ಲಿ ಹೀಗೆ ದುಃಖದ ಮುಖಗಳು ಪಯಣಿಸುತ್ತಿರುವುದು ಯಾರಿಗೂ ಕಾಡದೇ ಬಿಡುವುದಿಲ್ಲ. ಯಾವ ಪೇಂಟಿಂಗ್‌ಗಳಲ್ಲಿ ಕರುಣೆ, ಮನುಷ್ಯತ್ವ ಇದೆಯೊ ಅದರ ಬಗ್ಗೆಯೇ ನಾನು ಮಾತಾಡುತ್ತಿರುವೆ. ನನ್ನ ದೃಷ್ಟಿಯಲ್ಲಿ ಶ್ರೇಷ್ಠ ಕಲಾಕೃತಿಗಳ ಲಕ್ಷಣವೆಂದರೆ ಕರುಣೆ. ಅದು ಕರುಣೆಯನ್ನು ಹುಟ್ಟಿಸಬೇಕು.

ಈಗ ಹೊಸ ತಲೆಮಾರು ಇದೆಯಲ್ಲ, ಅವರು ಅಮೂರ್ತ ಚಿತ್ರಕಲೆ ಮತ್ತು ಕಥೆಗಳ ಆಧಾರವುಳ್ಳ ಚಿತ್ರಕಲೆಗಳನ್ನು ಇಷ್ಟಪಡುತ್ತಾರೆ. ಅವರಿಗೆ ಚಿತ್ರಕಲೆಗಳ ಬಗ್ಗೆ ಬೇರೆಯದೇ ಆದ ತಿಳಿವಳಿಕೆ ಇದೆ. ಕಾರಣ ಅವರಿಗೆ ಪರ್ಯಾಯ ಚಿತ್ರಕಲೆಗಳ ಬಗ್ಗೆ ನಾವು ತಿಳಿವಳಿಕೆ ಕೊಟ್ಟಿಲ್ಲ. ಹೀಗಾಗಿ ಪರಿಚಿತ ಕಥಾಪಾತ್ರಗಳ ಚಿತ್ರಕೃತಿಗಳನ್ನು ಅವರು ಇಷ್ಟಪಡುತ್ತಾರೆ. ನಾವು ಸಹಜವಾಗಿದ್ದರೆ ಕಲಾಕೃತಿಗಳ ಒಳಜಗತ್ತು ಅರ್ಥವಾಗುತ್ತದೆ. ನಾವು ಆರ್ಟ್ ಗ್ಯಾಲರಿಗಾಗಿ ಚಿತ್ರಗಳನ್ನು ತೆಗೆಯುತ್ತಿದ್ದೇವೆಯೊ ಅಥವಾ ಜನರ ಬಳಿಗೆ ಹೋಗಲು ಚಿತ್ರಗಳನ್ನು ತೆಗೆಯುತ್ತಿದ್ದೇವೆಯೊ? ಇದನ್ನು ಕಲಾವಿದರು ನಿರ್ಧರಿಸಬೇಕಾಗಿದೆ. ಚಿತ್ರಪ್ರಸಾದ್‌ರ ಕಲಾಕೃತಿಗಳು ಇವತ್ತಿಗೂ ಕಾಡುತ್ತವೆ. ಎಲ್ಲಾ ಚಳವಳಿಗಳು ಮುಗಿದ ಮೇಲೂ ಕಾಡುತ್ತವೆ. ಚಳವಳಿಯ ಸಂದರ್ಭದಲ್ಲಿ ತೆಗೆದ ಕಲಾಕೃತಿಗಳಿವು. ಶ್ರೇಷ್ಠ ಕಲಾಕೃತಿಗಳು ಚಳವಳಿ ಮುಗಿದ ಮೇಲೂ ತಮ್ಮ ಅಸ್ತಿತ್ವ ಉಳಿಸಿಕೊಳ್ಳುತ್ತವೆ. ಎಷ್ಟೋ ಸಲ ಕೆಟ್ಟ ಕಲೆ ಚಳವಳಿಯ ಸಂದರ್ಭದಲ್ಲಿ ಪ್ರಸಿದ್ಧಿ ಪಡೆದರೂ ಚಳವಳಿಯ ನಂತರ ಮರೆಗೆ ಸಲ್ಲುತ್ತದೆ.

◆ **ಭಾರತದಲ್ಲಿ ಈಗ ಕಲಾ ಚಿಂತನೆಯ ಸ್ಥಿತಿ ಹೇಗಿದೆ? ಯಾಕೆಂದರೆ, ನೀವು ಕಳೆದ ಐವತ್ತು ವರ್ಷಗಳಿಂದ ಕಲಾಕೃತಿಗಳನ್ನು ಸೃಷ್ಟಿಸುತ್ತಿದ್ದೀರಿ ಜೊತೆಗೆ ಕಲಾವಿಮರ್ಶೆಯನ್ನು ಮಾಡುತ್ತಲೂ ಬಂದಿದ್ದೀರಿ. ಭಾರತದ ಕಲಾ ಚಿಂತನೆಯ ಬಗ್ಗೆ ಇರುವ ನಿಮ್ಮ ಆರೋಪವೆಂದರೆ ಪಾಶ್ಚಾತ್ಯ ಕಲಾ ಚಿಂತನೆಯ ಮಾದರಿಗಳನ್ನು ಇಲ್ಲಿನ ಕಲಾಚಿಂತನೆಯ ಮೇಲೆ ಹೇರಲಾಗಿದೆ ಅಂತ.**

ಕಲೆಯ ವ್ಯಾಪ್ತಿ ದೊಡ್ಡದು. ನೀವು ಒಂದು ಹಂತದ ನಂತರ ಪಾಶ್ಚಾತ್ಯ ಕಲಾ ಚಿಂತನೆ, ಭಾರತೀಯ ಕಲಾಚಿಂತನೆಯ ಭೇದವನ್ನು ಅಳಿಸಬೇಕಾಗುತ್ತದೆ. ಇಲ್ಲವಾದರೆ ಬೆಳೆಯುವುದಿಲ್ಲ. ನೋಡಿ, ಅರಸರು ಕಲಾಕೃತಿಗಳನ್ನು ಮಾಡಿಸುವಾಗ ಅದರ ಸಮೀಕ್ಷೆ ಯಾರು ಮಾಡುತ್ತಾರೆ? ಅದರ ಸರಿತಪ್ಪುಗಳನ್ನು ಯಾರು ಹೇಳುತ್ತಾರೆ? ಯಾರಾದರೂ ನಿಷ್ಠುರ ವಿಮರ್ಶೆ ಮಾಡಿದರೆ ಮರಣದಂಡನೆಗೆ ಒಳಗಾಗಬೇಕಿತ್ತು. ರಾಜಾರವಿವರ್ಮನ ಚಿತ್ರಗಳಲ್ಲಿರುವ ದೇವತೆಗಳ ಅನಾಟೋಮಿ ಮನುಷ್ಯರ ಅನಾಟೋಮಿಯಂತಿದೆ. ಅಂದರೆ ಮನುಷ್ಯರು ಆ ಚಿತ್ರಗಳಿಂದ ಕನ್‌ವಿನ್ಸ್ ಆಗಬೇಕು. ನಾವು ಕಲೆಯ ಅರ್ಥಗಳಿಗೆ, ಪಾವಿತ್ರ್ಯಕ್ಕೆ ಮಹತ್ವ ಕೊಟ್ಟೆವೇ ಹೊರತು ಕಲಾವಿಮರ್ಶೆಗೆ ಮಹತ್ವ ಕೊಡಲಿಲ್ಲ. ಹೀಗಾದಾಗ ದೊಡ್ಡ ಕಲಾಚಿಂತನೆ ಹೇಗೆ ತಾನೆ ಹುಟ್ಟುವುದು? ಬಂಗಾಳದ ಕಲಾಸ್ಕೂಲ್‌ನಲ್ಲಿ ದೇವತೆಗಳ ಚಿತ್ರಗಳಿವೆ. ಮೈಸೂರು ಶೈಲಿಯಲ್ಲಿ ದೇವತೆಗಳ ಚಿತ್ರಗಳಿವೆ. ಎಷ್ಟು ವರ್ಷಗಳ ಕಾಲ ದೇವಾನುದೇವತೆಗಳ ಚಿತ್ರ ತೆಗೆಯುವಿರಿ. ಚಿತ್ರಗಳಲ್ಲಿ ಪ್ರಗತಿಯಿಲ್ಲವೆಂದ ಮೇಲೆ ಕಲಾಚಿಂತನೆಯಲ್ಲಿ ಪ್ರಗತಿ ಎಲ್ಲಿಂದ ಬರುವುದು? ರಾಮಾಯಣ, ಮಹಾಭಾರತ ಹೊರತುಪಡಿಸಿಯೂ ಚಿತ್ರಗಳಿರುತ್ತವೆ ಎಂಬ ತಿಳಿವಳಿಕೆಯನ್ನು ನಾವು ಜನರಿಗೆ ಕೊಡಲಿಲ್ಲ. ಹೀಗಾಗಿ ಬೇರೆ ಯಾವುದೇ ಚಿತ್ರಗಳನ್ನು ತೆಗೆದು ನೀವು ಅವರಿಗೆ ತೋರಿಸಿ, ಬಹುತೇಕ ಜನರು ಅವುಗಳನ್ನು ಕಲಾಕೃತಿಗಳೆಂದೇ ಒಪ್ಪುವುದಿಲ್ಲ. ಯಾಕೆಂದರೆ ಅವರಿಗೆ ನಾವು ಪರ್ಯಾಯ ಚಿತ್ರಕಲೆಯ ಮಾದರಿಗಳನ್ನು ಪರಿಚಯಿಸಲಿಲ್ಲ.

ಅಮೃತಾ ಶೇರ್‌ಗಿಲ್ ಮತ್ತು ರವೀಂದ್ರನಾಥ ಟ್ಯಾಗೋರ್ ಚಿತ್ರಕಲೆಯಲ್ಲಿ ಮಹತ್ವದ ಕೆಲಸ ಮಾಡಿದ್ದಾರೆ. ಅವರ ಕಲಾಚಿಂತನೆಯನ್ನು ನಾವು ಬೆಳೆಸಲಿಲ್ಲ. ಯಾವುದೇ ಪುರಾಣದ ಆಧಾರಗಳಿಲ್ಲದ, ಸಂದರ್ಭಮುಕ್ತವಾದ, ಕಥೆಗಳ ಬೆಂಬಲವಿಲ್ಲದ ಕಲಾಕೃತಿಗಳನ್ನು ತೆಗೆದಿದ್ದಾರೆ. ಭಾರತೀಯ ಚಿತ್ರಕಲೆಯಲ್ಲಿ ಇವರಿಬ್ಬರನ್ನು ಎಷ್ಟು ಗಂಭೀರವಾಗಿ ಸ್ವೀಕರಿಸಬೇಕಾಗಿತ್ತೊ ಅಷ್ಟು ಗಂಭೀರವಾಗಿ ಸ್ವೀಕರಿಸಲಿಲ್ಲ. ಇವರಿಬ್ಬರು ಯಾಕೆ ಮುಖ್ಯವೆಂದರೆ,